490 (786) ಶ್ರೀ ಖಾದರ್ ಯು.ಟಿ. (ಉಳ್ಳಾಲ) :- ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2002ರಲ್ಲಿ ಉಳ್ಳಾಲದಲ್ಲಿ ನಡೆದ ಗಲಭೆಗೆ ಕಾರಣಕರ್ತರಾಗಿದ್ದವರ ಹಾಗೂ ಅನಂತ ಕೊಲೆ ಪ್ರಕರಣದ ನಂತರ ಮೊಕದ್ದಮೆಯನ್ನು ಹಿಂದಕ್ಕೆ ಪಡೆಯಲು ಮತ್ತು ಎಂ.ಆರ್.ಪಿ.ಎಲ್. ವಿರೋಧಿ ಪ್ರತಿಭಟನೆ ಹಾಗೂ ಕೋಮು ಗಲಭೆಯನ್ನು ಹಿಂದಕ್ಕೆ ಪಡೆಯಲು ಆದೇಶಿಸಿದ್ದಕ್ಕೆ ಕಾರಣಗಳೇನು;

ಆ) ಉಳ್ಳಾಲದಲ್ಲಿ ಇತ್ತೀಚೆಗೆ ನಡೆದ ಉಪಚುನಾವಣೆ ಸಂದರ್ಭದಲ್ಲಿ ನಡೆದ ಗಲಭೆಯಲ್ಲಿ ಎಲ್ಲಾ ಜಾತಿ ವರ್ಗದ ಬಡವರು ಹಾಗೂ ದುಡಿಯುವ ಯುವಕರ ಮೇಲೆ ಮೊಕದ್ದಮೆ ಹೂಡಿದ್ದು, ಇವರ ಮುಂದಿನ ಜೀವನಕ್ಕೆ ಮಾರಕವಾಗುವುದರಿಂದ ಈ ಜನರ ಮೇಲಿರುವ ಮೊಕದ್ದಮೆಯನ್ನು ಸರ್ಕಾರ ಹಿಂದಕ್ಕೆ ಪಡೆಯಲು ಇರುವ ತೊಂದರೆ ಏನು?

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಅ) 2002ನೇ ಇಸವಿಯಲ್ಲಿ ಉಳ್ಳಾಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಯಾವುದೇ ಕೋಮುಗಲಭೆ ಘಟನೆಗಳು ವರದಿಯಾಗಿರುವುದಿಲ್ಲ.

ಆ) 02 ಪ್ರಕರಣಗಳು ದಾಖಲಾಗಿ ತನಿಖೆಯಲ್ಲಿರುತ್ತವೆ. ಈ ಪ್ರಕರಣಗಳು ಹಿಂದಕ್ಕೆ ಪಡೆಯುವ ಕುರಿತು ಯಾವುದೇ ಪ್ರಸ್ತಾವನೆ ಇರುವುದಿಲ್ಲ.

491 (788) ಶ್ರೀ ಖಾದರ್ ಯು.ಟಿ. (ಉಳ್ಳಾಲ) :- ಮಾನ್ಯ ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿನಲ್ಲಿ ನಡೆದ ಕೋಮು ಗಲಭೆ ಬಗ್ಗೆ ಅಗರ್‌ವಾಲ್ ಸಮಿತಿಯನ್ನು ಸರ್ಕಾರ ನೇಮಿಸಿದ್ದು ಇದುವರೆಗೂ ಸಮಿತಿ ವರದಿಯನ್ನು ನೀಡಿಲ್ಲದಿರುವುದಕ್ಕೆ ಕಾರಣವೇನು;

ಆ) ಈ ಗಲಭೆಯಲ್ಲಿ ಎರಡು ಕೊಲೆಗಳು ನಡೆದಿದ್ದು ಸಿ.ಓ.ಡಿ. ತನಿಖೆ ನಡೆಯುತ್ತಿದ್ದು ಅದು ಯಾವ ಹಂತದಲ್ಲಿದೆ;

ಇ) ನಿಜವಾದ ಅಪರಾಧಿಗಳನ್ನು ಪತ್ತೆ ಹಚ್ಚಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಈ) ನಿರಪರಾಧಿಗಳ ಬಿಡುಗಡೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಂ.ಪಿ. ಪ್ರಕಾಶ್ (ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಅ) ಮಂಗಳೂರಿನಲ್ಲಿ ನಡೆದ ಕೋಮು ಗಲಭೆ ಬಗ್ಗೆ ಶ್ರೀ ಎಂ.ಕೆ. ಅಗರ್‌ವಾಲ್ ಸಮಿತಿ ತನ್ನ ವರದಿಯನ್ನು ದಿನಾಂಕ : 2-12-2006 ರಂದು ಸರ್ಕಾರಕ್ಕೆ ಸಲ್ಲಿಸಿದೆ.

ಆ) 2006ನೇ ಅಕ್ಟೋಬರ್ ತಿಂಗಳಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಗಲಭೆಯ ಸಂದರ್ಭದಲ್ಲಿ 02 ಕೊಲೆಗಳು ನಡೆದಿರುತ್ತದೆ. ಸದರಿ 02 ಕೊಲೆ ಪ್ರಕರಣಗಳನ್ನು ಸರ್ಕಾರದ ಆದೇಶ ಸಂಖ್ಯೆ : ಒಇ/113/ಸಿಓಡಿ/06 ದಿನಾಂಕ : 13-10-2006 ರಂತೆ ಸಿ.ಓ.ಡಿ. ಘಟಕಕ್ಕೆ ವರ್ಗಾಯಿಸಲಾಗಿದ್ದು, ಅವು ಸಿ.ಓ.ಡಿ. ತನಿಖೆಯಲ್ಲಿವೆ. ಸಿ.ಓ.ಡಿ ಅಧಿಕಾರಿಗಳು ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ. ಈ ಎರಡು ಪ್ರಕರಣಗಳು ನ್ಯಾಯಾಲಯದಲ್ಲಿ ಎಸ್.ಸಿ. ಸಂಖ್ಯೆ : 09-2007 ಮತ್ತು 12/2007ರಲ್ಲಿ ವಿಚಾರಣೆಯಲ್ಲಿರುತ್ತದೆ.

ಇ) ಪ್ರಕರಣದಲ್ಲಿ ಸೂಕ್ತ ಸಾಕ್ಷಾಧಾರಗಳನ್ನು ಸಂಗ್ರಹಿಸಿ ನಿಜವಾದ ಆರೋಪಿಗಳ ವಿರುದ್ಧ ಮಾತ್ರ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ.

ಈ) ಯಾವುದೇ ನಿರಪರಾಧಿಗಳನ್ನು ಬಂಧಿಸಿಲ್ಲವಾದ್ದರಿಂದ ಬಿಡುಗಡೆಗೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

492 (789) ಶ್ರೀ ಖಾದರ್ ಯು.ಟಿ. (ಉಳ್ಳಾಲ) :- ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಳ್ಳಾಲ ವಿಧಾನ ಸಭಾ ಕ್ಷೇತ್ರಕ್ಕೆ ಸೇರಿದ ಬೇಂಗ್ರೆ ಪ್ರದೇಶವು ದ್ವೀಪದಂತಿದ್ದು 10 ಸಾವಿರ ಜನ ಸಂಖ್ಯೆ ಇದ್ದು ಈ ಜಾಗ ಬಂದರು ಇಲಾಖೆಗೆ ಸೇರಿದ ಪ್ರದೇಶವಾಗಿದ್ದು ಬಹುತೇಕ ಜನರಿಗೆ ಹಕ್ಕುಪತ್ರ ನೀಡಿರುವುದು ನಿಜವಲ್ಲವೇ;

ಆ) ಹಾಗಿದ್ದಲ್ಲಿ ಬಾಕಿ ಇರುವವರಿಗೆ ಯಾವಾಗ ಹಕ್ಕು ಪತ್ರ ನೀಡಲಾಗುವುದು;